ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 16-23
©*IIMRD*, Mysuru
IIMRD JOURNALS
www.iimrd.com

# ಕಲ್ಯಾಣ ಕರ್ನಾಟಕ ಪ್ರದೇಶದ ಸಮಸ್ಯೆಗಳು ಮತ್ತು ಸವಾಲುಗಳು: ಒಂದು ವಿಶ್ಲೇಷಣೆ

**ಡಾ. ಬಸವರಾಜ ಸುಂಕೇಶ್ವರ**[*]
[*]ಅತಿಥಿ ಉಪನ್ಯಾಸಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಮಾನ್ವಿ, ರಾಯಚೂರು ಜಿಲ್ಲೆ.

***ಸಾರಾಂಶ* (Abstract)**

*ಕಲ್ಯಾಣ ಕರ್ನಾಟಕ ಭಾಗವು ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು, ಹಿಂದೆ ಇದನ್ನು ಹೈದರಾಬಾದ-ಕರ್ನಾಟಕ ಎಂದು ಕರೆಯಲಾಗುತಿತ್ತು. ದಾಸೋಹ ಸಂಸ್ಕೃತಿ-ಪರಂಪರೆಯನ್ನು ಒಳಗೊಂಡಿರುವ ಶರಣರ ನಾಡಿಗೆ ಕಲ್ಯಾಣ ಕರ್ನಾಟಕ ಹೆಸರು ನಿಜಕ್ಕೂ ಅರ್ಥಪೂರ್ಣ ಹಾಗೂ ಅನ್ವರ್ಥಕ. ಹೈದರಾಬಾದ-ಕರ್ನಾಟಕ ಇಲ್ಲವೇ ಮುಂಬೈ-ಕರ್ನಾಟಕ ಎಂಬುದು ಗುಲಾಮಗಿರಿಯ ಸಂಕೇತ/ಹೆಸರು ಎಂದು ಖ್ಯಾತ ಸಂಶೋಧಕ ಡಾ.ಎಂ.ಚಿದಾನಂದ ಮೂರ್ತಿ ಮೊದಲ ಬಾರಿಗೆ ಧ್ವನಿಯೆತ್ತಿದರು. ಆಗ ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಎಂದು ಮರುನಾಮಕರಣ ಆಗಲೆಂದು ಹೇಳಿದರು. ಇದರ ಪರಿಣಾಮವೇ ಕಲ್ಯಾಣ ಕರ್ನಾಟಕ ಎಂಬ ಹೆಸರು ಪ್ರವರ್ಧಮಾನಕ್ಕೆ ಬಂತು. ಪ್ರಸ್ತುತ ಲೇಖನದಲ್ಲಿ ಈ ಭಾಗದ (ಕಲ್ಯಾಣ ಕರ್ನಾಟಕ) ಜನರು ಎದುರಿಸುತ್ತಿರುವ ಸಮಸ್ಯೆಗಳು, ಸಮಸ್ಯೆಗೆ ಕಾರಣ, ಪರಿಣಾಮ ಮತ್ತು ಅಭಿವೃದ್ಧಿಯಲ್ಲಿ 371 (ಜೆ) ಕಲಂನ ಪಾತ್ರ ಮುಂತಾದ ವಿಚಾರಗಳನ್ನು ವಿಶ್ಲೇಷಿಸಲಾಗಿದೆ.*

***ಮುಖ್ಯ ಪದಗಳು* (Keywords):** ಕಲ್ಯಾಣ ಕರ್ನಾಟಕ, ಹೈದರಬಾದ-ಕರ್ನಾಟಕ, 371 (ಜೆ), ಅಭಿವೃದ್ಧಿ.

## ಪೀಠಿಕೆ

ಹೈದರಬಾದ್-ಕರ್ನಾಟಕ ಪ್ರದೇಶಕ್ಕೆ ಕಲ್ಯಾಣ ಕರ್ನಾಟಕ ಎಂದು ನಾಮಕರಣ ಮಾಡಬೇಕೆಂಬ ವಿಷಯ 2010ರಲ್ಲಿ ಕಲಬುರಗಿಯಲ್ಲಿ ನಡೆದ 'ಕಲಬುರಗಿ ಕಂಪು' ಕಾರ್ಯಕ್ರಮದಲ್ಲಿ ಹೆಚ್ಚು ಮುಂಚೂಣಿಗೆ ಬಂತು. ಈ ಮೊದಲು ಎರಡು ವರ್ಷಗಳ ಹಿಂದೆಯಷ್ಟೇ ಮಾಜಿ ಸಂಸದ ಬಸವರಾಜ ಪಾಟೀಲ್ ಸೇಡಂ ಅವರ ನೇತೃತ್ವದಲ್ಲಿ 'ಕಲ್ಯಾಣ ಕರ್ನಾಟಕ' ಉದ್ಘೋಷಣೆ ಅಂಗವಾಗಿ 'ಕಲ್ಯಾಣ ಕರ್ನಾಟಕ ವಿಕಾಸ ಜಾತ್ರೆ' ನಡೆದು ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸಾನಿಧ್ಯದಲ್ಲಿ 'ಕಲ್ಯಾಣ ಕರ್ನಾಟಕ' ಎಂದು ಒಕ್ಕೊರಲಿನಿಂದ ಘೋಷಣೆ ಮಾಡಲಾಯಿತು. ಆಗ ಕೇಂದ್ರದಲ್ಲಿ ವಾರ್ತಾ ಹಾಗೂ ಪ್ರಸಾರ ಸಚಿವರಾಗಿದ್ದ ವೆಂಕಯ್ಯನಾಯ್ಡು (ಈಗ ಉಪರಾಷ್ಟ್ರಪತಿ) ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರೆ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಗೊ.ರು. ಚನ್ನಬಸಪ್ಪ ಅವರು ಕಲ್ಯಾಣ ಕರ್ನಾಟಕ ಕುರಿತು ಸುದೀರ್ಘ ಭಾಷಣ ಮಾಡಿದರು. ತರುವಾಯ ಸೇಡಂ ಶಾಸಕ ರಾಜುಕುಮಾರ ಪಾಟೀಲ್ ಅವರು

*Please cite this article as: ಬಸವರಾಜ ಸುಂಕೇಶ್ವರ (2021). ಕಲ್ಯಾಣ ಕರ್ನಾಟಕ ಪ್ರದೇಶದ ಸಮಸ್ಯೆಗಳು ಮತ್ತು ಸವಾಲುಗಳು : ಒಂದು ವಿಶ್ಲೇಷಣೆ. ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(1). ಪು.ಸಂ. 16–23*

ಬೆಳಗಾವಿ ಅಧಿವೇಶನದಲ್ಲಿ ಈ ಭಾಗದ ಎಲ್ಲ ನಲವತ್ತೊಂದು ಶಾಸಕರುಗಳಿಂದ ಸಹಿ ಸಂಗ್ರಹಿಸಿ ನಿಯೋಗ ಮೂಲಕ ಆಗಿನ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿಯವರಿಗೆ ಮರು ನಾಮಕರಣಕ್ಕೆ ಒತ್ತಾಯಿಸಿದರು. ಹಾಲಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು 2019 ರಲ್ಲಿ ಹೈದರಾಬಾದ–ಕರ್ನಾಟಕವನ್ನು 'ಕಲ್ಯಾಣ ಕರ್ನಾಟಕ' ಎಂದು ಘೋಷಿಸಿದರು. ಇದರಿಂದ ಬಹು ವರ್ಷಗಳ ಈ ಭಾಗದ ಜನರಿಗೆ ಮರುನಾಮಕರಣ ಆಸೆ ಇಂದು ಈಡೇರಿದಂತಾಗಿದೆ. ಜತೆಗೆ ಜನರಿಗೆ ಭಾವನಾತ್ಮಕ ಯಶಸ್ಸು ಸಿಕ್ಕಂತಾಗಿದೆ.

ಸೆಪ್ಟೆಂಬರ್ 17, 1948 ರಂದು ನಿಜಾಮನ ರಾಜಶಾಹಿ ದುರಾಡಳಿತದಿಂದ ಮುಕ್ತಿಗೊಂಡ ನಂತರವೂ ಒಂದಲ್ಲ ಒಂದು ರೀತಿಯಲ್ಲಿ ಅನ್ಯಾಯ, ಅತ್ಯಾಚಾರ ಮತ್ತು ದೌರ್ಜನ್ಯಗಳಿಗೆ ತುತ್ತಾಗುತ್ತಲೆ ಬಂದಿದೆ. ರಾಜ್ಯ ಪುನರ್ವಿಂಗಡಣೆ ಅಥವಾ ಕರ್ನಾಟಕ ಏಕೀಕರಣಗೊಂಡು (1956) ಆರವತ್ತೈದು ವರ್ಷ ಕಳೆದರೂ ಪ್ರಾದೇಶಿಕ ಅಸಮಾನತೆಯಿಂದಾಗಿ ಕರ್ನಾಟಕ ಸಮಗ್ರವಾಗಿ ಅಭಿವೃದ್ಧಿಯಾಗಿಲ್ಲ. ರಾಜ್ಯದ ಒಂದು ಭಾಗ ಪ್ರಗತಿ ಸಾಧಿಸಿದರೆ, ಇನ್ನೊಂದು ಭಾಗ ಪ್ರಗತಿಯಿಂದ ವಂಚಿತವಾಗಿ ಎಲ್ಲ ರಂಗದಲ್ಲೂ ಹಿಂದುಳಿದಿದೆ. ರಾಜ್ಯದಲ್ಲಿ ಇಲ್ಲಿಯವರೆಗೆ ಅಧಿಕಾರ ಚುಕ್ಕಾಣಿ ಹಿಡಿದ ಸರಕಾರಗಳು ಈ ಭಾಗವನ್ನು ನಿರ್ಲಕ್ಷ್ಯ ಹಾಗೂ ತಾತ್ಸಾರದಿಂದಲೇ ನೋಡುತ್ತ ಬಂದಿವೆ. ಬೇರೆ ಭಾಗದ ಜನ ಕನ್ನಡ ನಾಡನ್ನು ಎಷ್ಟು ಪ್ರೀತಿಸುತ್ತಾರೋ, ಹೈದರಾಬಾದ–ಕರ್ನಾಟಕ ಭಾಗದವರೂ ಅಷ್ಟೇ ಪ್ರೀತಿಸುತ್ತಾರೆ. ಮತ್ತು ಅಷ್ಟೇ ತೆರಿಗೆಯನ್ನು ಪಾವತಿಸುತ್ತಾರೆ. ಆದರೆ ರಾಜ್ಯದ ಸೌಲಭ್ಯ, ಹಣಕಾಸು, ಅವಕಾಶ, ಹಾಗೂ ಪ್ರೋತ್ಸಾಹ ಇತ್ಯಾದಿ ಹಂಚಿಕೆ ಪ್ರಶ್ನೆ ಬಂದಾಗ ರಾಜ್ಯದ ಬೆಂಗಳೂರು, ಮೈಸೂರು, ಧಾರವಾಡ ಮತ್ತು ಮಂಗಳೂರು ಭಾಗಗಳಿಗೆ ಸಿಂಹಪಾಲು ಲಭಿಸುತ್ತದೆ. ಆದರೆ ಹೈದರಬಾದ್–ಕರ್ನಾಟಕ ಪ್ರದೇಶವನ್ನು ಕಡೆಗಣಿಸಲಾಗಿದೆ.

ಹಾಗಾಗಿ ಈ ಅಸಮಾನತೆಯ ನಿವಾರಣೆಗಾಗಿ ಮತ್ತು ಸರ್ವತೋಮುಖ ಅಭಿವೃದ್ಧಿಗಾಗಿ ಮೀಸಲಾತಿ ನೀಡಬೇಕೆಂದು ವೈಜನಾಥ ಪಾಟೀಲ್‌ರವರು ಹೈದರಾಬಾದ–ಕರ್ನಾಟಕ ಹೋರಾಟ ಸಮಿತಿ ಅಡಿಯಲ್ಲಿ ಎರಡು ದಶಕಗಳ ಕಾಲ ಅವಿರತವಾಗಿ ಹೋರಾಟ ಮಾಡಿದರು. ಅವರಲ್ಲದೇ ವಿಶ್ವನಾಥರೆಡ್ಡಿ ಮುದ್ನಾಳ್, ವಿದ್ಯಾಧರ ಗುರೂಜಿ, ಧರ್ಮಸಿಂಗ್, ಮಲ್ಲಿಕಾರ್ಜುನ ಖರ್ಗೆ, ರಾಘವೇಂದ್ರ ಕುಷ್ಟಗಿ, ಶಿವರಾಮ ಮೋಘ, ಅಲ್ಲಮಪ್ರಭು ಬೆಟ್ಟದೂರು, ಆರ್.ಕೆ. ಹುಡಗಿ, ಕುಳಗೇರಿ, ಪಟ್ಟೇದಾರ್, ಎಂ.ಬಿ.ಅಂಬಲಗಿ ಮತ್ತು ರಜಾಕ್ ಉಸ್ತಾದ್ ಈ ಮೊದಲಾದವರು ಈ ಪ್ರದೇಶದ ಅಭಿವೃದ್ಧಿಗೆ ಶ್ರಮಿಸಿದ್ದಾರೆ.

**ಕಲ್ಯಾಣ ಕರ್ನಾಟಕ ಪ್ರದೇಶದ ಸಮಸ್ಯೆಗಳು**

ಕಲ್ಯಾಣ ಕರ್ನಾಟಕ ಭಾಗಕ್ಕೆ ಹಿಂದೆ ದಕ್ಕಿರುವುದು ಇಂದು ಸಿಕ್ಕಿರುವುದು ಎಷ್ಟೆಂದು ಗಮನಿಸಿದರೆ, ನಮ್ಮನ್ನಾಳುವ ಸರ್ಕಾರಗಳಿಗೆ ಈ ಭಾಗದ ಮೇಲಿರುವ ಕಾಳಜಿ ಎಷ್ಟೆಂಬುದು ತಿಳಿಯುತ್ತದೆ. ಒಂದೆಡೆ ಅಭಿವೃದ್ಧಿ ಹೆಸರಿನಲ್ಲಿ ಅಧಿಕಾರ ಗದ್ದುಗೆ ಹಿಡಿದು ರಾಜ್ಯದ ಒಂದು ಭಾಗ ಅಭಿವೃದ್ಧಿಯಾಗುತ್ತಿದ್ದರೆ, ಇನ್ನೊಂದೆಡೆ ಕಲ್ಯಾಣ ಕರ್ನಾಟಕ ಹಿಂದುಳಿಯುತ್ತಿದೆ. ಶಿಕ್ಷಣ, ರಾಜಕೀಯ, ಪ್ರಜಾಸತಾತ್ಮಕ ಸೌಲಭ್ಯಗಳು ನಮಗೆ ಸಂಬಂಧಿಸಿಲ್ಲ ಎನ್ನುವಷ್ಟರ ಮಟ್ಟಿಗೆ ಸರಕಾರಗಳ ಮನಸ್ಥಿತಿಯಿದೆ. ಶೈಕ್ಷಣಿಕವಾಗಿ ಅನ್ಯಭಾಗದವರೊಂದಿಗೆ ಸ್ಪರ್ಧಿಸಲಾಗದೇ ಸಿ ಇಲ್ಲವೇ ಡಿ ಗ್ರೂಪ್ ಹುದ್ದೆಗಳಿಗೆ ಸಮಧಾನ ಪಡಬೇಕಾದ

ಪರಿಸ್ಥಿತಿಯಿದೆ. ಶೈಕ್ಷಣಿಕ ಸಾಲಿನಲ್ಲಿ ಕೊನೆಸ್ಥಾನ ಉಳಿಸಿಕೊಂಡಿರುವ ಈ ಭಾಗದ ಜಿಲ್ಲೆಗಳಿಗೆ ಉದ್ಯೋಗದ ಮೇಲಿನ ಆಕಾಂಕ್ಷೆಗಳೇ ಮಾಸಿ ಹೋಗಿವೆ. 17ನೇ ಸೆಪ್ಟಂಬರ್ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಹೆಸರಿನಲ್ಲಿ ಧ್ವಜಾರೋಹಣ ನಡೆಯುತ್ತದೆ ಎನ್ನುವುದು ಬಿಟ್ಟರೆ, ಸರಕಾರಕ್ಕೆ ಇದು ಅಷ್ಟೊಂದು ಮಹತ್ವದ ದಿನವೇ ಆಗಿಲ್ಲ. ಯಾಕೆಂದರೆ ಈ ಭಾಗದ ಮತಗಳಿಗೆ ಮಾತ್ರ ಬೆಲೆ ವಿನಹಃ ಜನರ ಮನಸ್ಸಿಗಲ್ಲ.

ವೀರೇಂದ್ರ ಪಾಟೀಲ್, ವೈಜನಾಥ ಪಾಟೀಲ್, ಧರ್ಮಸಿಂಗ್, ಮಲ್ಲಿಕಾರ್ಜುನ ಖರ್ಗೆ, ಬಯ್ಯಾಪೂರ, ಅನ್ವರಿ, ಈಶ್ವರಖಂಡ್ರೆ, ಖಾಶೆಂಪೂರೆ, ಮಲ್ಕರೆಡ್ಡಿ, ನಾಡಗೌಡ, ಬಿ.ಶ್ರೀರಾಮುಲು ಮತ್ತು ಇತ್ತೀಚೆಗೆ ಕೇಂದ್ರದಲ್ಲಿ ಭಗವಂತರಾವ ಖೂಬಾ ಇತರೆ ಪ್ರಮುಖರನ್ನು ಬಿಟ್ಟರೆ, ಈ ಭಾಗಕ್ಕೆ ರಾಜಕೀಯ ಪ್ರಾತಿನಿಧ್ಯ ನೀಡಿದ್ದು ಬಹಳ ಕಡಿಮೆ. ಕಲ್ಯಾಣ ಕರ್ನಾಟಕದ (ಹೈದರಬಾದ್–ಕರ್ನಾಟಕದ) ನೂರಾರು ಸಮಸ್ಯೆಗಳನ್ನು ಅಧ್ಯಯನ ಮಾಡಿ ಪ್ರೊ.ಡಿ.ಎಂ.ನಂಜುಂಡಪ್ಪ ವರದಿಯಲ್ಲಿ ಕೆಲ ಮಹತ್ವದ ಬೇಡಿಕೆಗಳನ್ನು ಮಂಡಿಸಿತ್ತು. ಈ ಭಾಗದ ಸರ್ವತೋಮುಖ ಅಭಿವೃದ್ಧಿ ಕಾಣಬೇಕಾದರೆ, ಏಳು ಸಚಿವಸ್ಥಾನ ನೀಡಬೇಕೆಂದು ಉಲ್ಲೇಖಿಸಲಾಗಿದೆ. ಆದರೆ ವಾಸ್ತವ್ಯದಲ್ಲಿ ಇನ್ನು ಅನುಷ್ಠಾನಕ್ಕೆ ಬಂದಿಲ್ಲ.

ಶೈಕ್ಷಣಿಕವಾಗಿ ಇಲ್ಲಿಯ ಶಾಲಾ–ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳೇ ಇಲ್ಲ. ಇನ್ನು ಸುಸಜ್ಜಿತ ಹಾಗೂ ಸಮರ್ಪಕ ಪ್ರಯೋಗಾಲಯ, ಗ್ರಂಥಾಲಯಗಳ ಕೊರತೆ ಎದ್ದು ಕಾಣುತ್ತದೆ. ಹಲವು ಕಡೆ ಶಿಕ್ಷಕ–ಉಪನ್ಯಾಸಕರ ಕೊರತೆ ಇದೆ. ಇದರಿಂದ ವಿದ್ಯಾರ್ಥಿಗಳ ಶಿಕ್ಷಣ ಗುಣಮಟ್ಟ ಕುಂಠಿತವಾಗಲು ಕಾರಣವಾಗಿದೆ. ಡಿ.ಇಡಿ, ಬಿ.ಇಡಿ, ಮೆಡಿಕಲ್, ಡೆಂಟಲ್, ವೆಟರ್ನರಿ, ಇಂಜಿನೀಯರಿಂಗ್ ಮತ್ತು ಕಾನೂನು ವೃತ್ತಿಪರ ಶಿಕ್ಷಣ ಸಂಸ್ಥೆಗಳು ಬೆರಳೆಣಿಕೆಯಷ್ಟು ಮಾತ್ರ ಇವೆ. ಐ.ಐ.ಟಿ. ಮತ್ತು ಏಮ್ಸ್ ಮಂಜೂರಾತಿ ಬೇಡಿಕೆ ಇದುವರೆಗೂ ಈಡೇರಿಲ್ಲ. ಶಾಲಾ–ಕಾಲೇಜುಗಳ ವ್ಯವಸ್ಥೆಯನ್ನು ಗಮನಿಸಿದರೆ, ಆ ಭಾಗಗಳ ಕಾಲುಭಾಗ ಪ್ರಗತಿ ನಮ್ಮಲ್ಲಿ ಆಗಿಲ್ಲ. ಸಮರ್ಪಕ ಕಟ್ಟಡ, ಉತ್ತಮ ಪರಿಸರವುಳ್ಳ ಸಕಲ ಸೌಲಭ್ಯ ಒಳಗೊಂಡ ವಸತಿ ನಿಲಯಗಳಿಲ್ಲ. ವಸತಿ ಶಾಲಾ–ಕಾಲೇಜುಗಳ ಶಿಕ್ಷಣವಂತೂ ತೀರ ಕಡಿಮೆ ಸಂಖ್ಯೆಯಲ್ಲಿವೆ. ಹೊಟ್ಟೆಪಾಡಿಗಾಗಿ ಬೆಂಗಳೂರು, ಮುಂಬೈ, ಪುಣೆ, ಚೆನ್ನೈ, ಗೋವಾದಂತಹ ನಗರಗಳು ವೇಗವಾಗಿ ಬೆಳೆಯಲು ಈ ಭಾಗದ ಜನರ ನೆತ್ತರು ಬಸಿಯುತ್ತಿದೆ. ಗುಳೆ ಎಂಬ ಪಿಡುಗು ಇಲ್ಲಿನ ಬಡಕುಟುಂಬಗಳ ಬದುಕನ್ನೇ ಮೂರಾಬಟ್ಟೆ ಮಾಡಿದೆ. ನಿಸ್ತೇಜ ಕಣ್ಣುಗಳಿಂದ ದೂರ ದೂರದಲ್ಲಿರುವ ಮಕ್ಕಳ ಬರುವಿಕೆಗೆ ಕಾಯುವ ಹೆತ್ತವರು ಇಂದಿಗೂ ಕಾಣ ಸಿಗುತ್ತಾರೆ.

ಭತ್ತ–ತೊಗರಿ ಬೆಳೆಯುವ ಪ್ರದೇಶ, ಚಿನ್ನ ದೊರೆಯುವ ನಾಡು, ಬೆಳಕು ನೀಡುವ ಬೀಡು, ಬಿಸಿಲು ನಾಡು ಎಂದೆಲ್ಲ ಕರೆಯಿಸಿಕೊಳ್ಳುವ ಈ ಭಾಗದಲ್ಲಿ ಉದ್ಯೋಗಕ್ಕೆ ಬರವಿದೆ. ಇಲ್ಲಿ ಸ್ಥಾಪನೆಯಾದ ಕಾರ್ಖಾನೆಗಳಲ್ಲಿ ಸ್ಥಳೀಯರು ಅವಕಾಶದಿಂದ ವಂಚಿತರಾಗಿದ್ದಾರೆ. ವಸತಿ, ರಸ್ತೆ ಸಾರಿಗೆ, ವಿದ್ಯುತ್ ಸೌಲಭ್ಯಗಳಿಲ್ಲದ ಎಷ್ಟೋ ಗ್ರಾಮಗಳು ಇನ್ನು ಈ ಭಾಗದಲ್ಲಿವೆ. ಆಸ್ಪತ್ರೆ ಸೌಲಭ್ಯವಿಲ್ಲದೆ ಇಂದಿಗೂ ನಾಟಿ ಔಷಧಿಯನ್ನು ಅವಲಂಭಿಸಿರುವ ಎಷ್ಟೋ ತಾಂಡಾಗಳು ಈ ಭಾಗದಲ್ಲಿವೆ.

ಅಪೌಷ್ಠಿಕತೆ, ರಕ್ತಹೀನತೆ, ಅಂಗವಿಕಲತೆಯಿಂದ ಬಳಲುವಂತಹ ಅದೆಷ್ಟೋ ಬಡ ಮಕ್ಕಳಿದ್ದಾರೆ. ಕೆಲ ಜನರಿಂದ ಶ್ರೀಮಂತ ಜಿಲ್ಲೆ ಎನಿಸಿಕೊಂಡಿರುವ ಬಳ್ಳಾರಿಯಲ್ಲೂ ಬಡ ಕುಟುಂಬಗಳ ಆರ್ತನಾದವಿದೆ. ಗಣಿ

ಕಾರ್ಯನಿಂತ ಮೇಲೆ ಎಷ್ಟೋ ಕುಟುಂಬಗಳು ಅಕ್ಷರಶಃ ಬೀದಿ ಪಾಲಾಗಿವೆ. ಹೊಟ್ಟೆ ಹೊರೆಗಾಗಿ ಹೆತ್ತ ಮಕ್ಕಳನ್ನೇ ಮಾರುವ ದಯನೀಯ ದುಃಸ್ಥಿತಿ ಕಲಬುರಗಿ ಜಿಲ್ಲೆ ಚಿಂಚೋಳಿ ತಾಲೂಕಿನಲ್ಲಿದೆ. ಸರಕಾರದ ಸವಲತ್ತುಗಳ ಮಾಹಿತಿಯಿಲ್ಲದೆ ಅದರ ಸೌಕರ್ಯ ಪಡೆಯುವಲ್ಲಿ ಇಲ್ಲಿಯ ಜನರು ಹಿಂದುಳಿದಿದ್ದಾರೆ. ನೀರಾವರಿ ಯೋಜನೆಗೆ ನೀರಿನಂತೆ ಹರಿಯುವ ಹಣ ಫಲಾನುಭವಿಗಳಿಗೆ ತಲುಪುತ್ತಿದೆಯೇ ಎಂದು ಕೇಳಿದರೆ, ಕೊನೆಯ ಭಾಗದ ರೈತರಿಗೆ ಇನ್ನು ನೀರು ಸಿಕ್ಕಿಲ್ಲ ಎಂಬ ಉತ್ತರ ಮಾತ್ರ ಸಿಗುತ್ತದೆ. ಯುವಪೀಳಿಗೆ ಸರಕಾರಿ ಉನ್ನತ ಹುದ್ದೆಗಳನ್ನು ಅಲಂಕರಿಸಲು ಗುಣಾತ್ಮಕವಾದ ಸ್ಪರ್ಧಾತ್ಮಕ ತರಬೇತಿ ಕೇಂದ್ರಗಳಿಲ್ಲ. ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳುತ್ತಿಲ್ಲ.

ಪ್ರಾಕೃತಿಕ ವೈವಿಧ್ಯತೆ, ತನ್ನದೇ ಆದ ಇತಿಹಾಸ, ಪರಂಪರೆ, ಸಂಸ್ಕೃತಿಯ ಸಿರಿವಂತಿಕೆಗೆ ಅನುಪಮ ಕೊಡುಗೆ ನೀಡಿರುವ ಕಲ್ಯಾಣ ಕರ್ನಾಟಕವು  ಬಡತನ, ಅನಕ್ಷರತೆ, ನಿರುದ್ಯೋಗ, ಜಾತಿವ್ಯವಸ್ಥೆ, ಮೂಢನಂಬಿಕೆ, ಕಂದಾಚಾರ, ಬಾಲ್ಯವಿವಾಹದಂತಹ ಅನೇಕ ಸಮಸ್ಯೆಗಳಿಂದ ಬಳಲುತ್ತಿದೆ.  ಈ ಸಮಸ್ಯೆಗಳ ಪರಿಹಾರಕ್ಕಾಗಿ ಎರಡು ದಶಕದ ಹೋರಾಟದ ಫಲವಾಗಿ ಈ ಭಾಗಕ್ಕೆ ಸಂವಿಧಾನದ 371 (ಜೆ) ವಿಧಿ ಮೂಲಕ ನ್ಯಾಯ ದೊರಕಿದ್ದು, ಪ್ರಸ್ತುತ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಸಿಗುತ್ತಿದೆ.  ಆದರೆ ಸಮರ್ಪಕ ಅನುಷ್ಠಾನದಲ್ಲಿ ಹತ್ತಾರು ಲೋಪದಿಂದಾಗಿ ದೇವರು ವರ ಕೊಟ್ಟರೂ ಪೂಜಾರಿ ಕೊಡುತ್ತಿಲ್ಲ ಎಂಬಂತಾಗಿದೆ ಈ ಭಾಗದ ಪರಿಸ್ಥಿತಿ. ಸಮಸ್ಯೆ ಪರಿಹರಿಸಲು ಯಾವ ಸರ್ಕಾರಗಳೂ ಇಲ್ಲಿಯವರೆಗೆ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ. ಕುಡಿಯುವ ನೀರು, ಒಳಚರಂಡಿ, ನಗರ ಹಾಗೂ ಗ್ರಾಮೀಣ ಪ್ರದೇಶಾಭಿವೃದ್ಧಿ ಕೌಶಲ್ಯ ಉತ್ತೇಜನಕ್ಕೆ ಒತ್ತು ನೀಡಿ, ಮೂಲಸೌಕರ್ಯಗಳಿಗೆ ಆದ್ಯತೆ ನೀಡಿಲ್ಲ. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಪ್ರತಿವರ್ಷ ರೂ.1,500 ಕೋಟಿ ಅನುದಾನ ನೀಡಲಾಗುತ್ತಿದೆ. ಈ ಭಾಗದ ನಲವತ್ತು ಕ್ಷೇತ್ರಗಳಿಗೆ ಲೆಕ್ಕ ಹಾಕಿದರೆ ಈ ಅನುದಾನ ಬಹಳ ಕಡಿಮೆಯೆನಿಸುತ್ತದೆ. ಬಿಡುಗಡೆಯಾದ ಹಣವು ಸಮರ್ಪಕವಾಗಿ ಪೂರ್ಣಪ್ರಮಾಣದಲ್ಲಿ ಖರ್ಚಾಗುತ್ತಿಲ್ಲ. ಈ ಪ್ರದೇಶದ ಅಭಿವೃದ್ಧಿಗಾಗಿ ಅಂದು ಧರ್ಮಸಿಂಗ್ ಅವರ ಅಧ್ಯಕ್ಷತೆಯಲ್ಲಿ ಆಗಿನ ಮುಖ್ಯಮಂತ್ರಿ ಆರ್. ಗುಂಡೂರಾವ್ ಅವರು ರಚಿಸಿದ ಅಭಿವೃದ್ಧಿ ಅಧ್ಯಯನ ಸಮಿತಿ ವರದಿಯನ್ನು ಜನತಾ ಪಕ್ಷದ ರಾಮಕೃಷ್ಣ ಹೆಗಡೆಯವರು ಕಾರ್ಯಗತ ಮಾಡಲಿಲ್ಲವೆಂದು ವೈಜನಾಥರು ಕೋಪಗೊಂಡು 1984ರಲ್ಲಿ ಸಚಿವ ಸಂಪುಟ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಆ ಕಾರಣಕ್ಕಾಗಿ ಪಕ್ಷದಲ್ಲಿ ಅಶಿಸ್ತಿನಿಂದ ವರ್ತಿಸಿದರೆಂಬ ಆಪಾದನೆಗೂ ಗುರಿಯಾದರಲ್ಲದೇ ಪಕ್ಷದ ಸದಸ್ಯತ್ವದಿಂದಲೂ ಉಚ್ಚಾಟಿತಗೊಂಡರು. ಇದು ಈ ಭಾಗದ ಅಭಿವೃದ್ಧಿಗಾಗಿ ಅವರಿಗಿದ್ದ ಕಳಕಳಿಯನ್ನು ಎತ್ತಿ ತೋರಿಸುತ್ತದೆ.

ಆಗ ಹಿರಿಯ ನಾಯಕರಾದ ವಿಶ್ವನಾಥರೆಡ್ಡಿ ಮುದ್ನಾಳರವರು 1989 ರಲ್ಲಿ ಎಸ್. ಆರ್. ಬೊಮ್ಮಾಯಿ ಅವರ ಸಂಪುಟ ದರ್ಜೆಯಲ್ಲಿ ಗ್ರಾಮೀಣ ಅಭಿವೃದ್ಧಿ ಸಚಿವರಾಗಿದ್ದಾಗ, ಹೈದರಾಬಾದ–ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸಿ 50 ಕೋಟಿ ರೂ. ವಿಶೇಷ ಅನುದಾನವನ್ನು ಆಯವ್ಯಯದಲ್ಲಿ ಅವಕಾಶ ಕಲ್ಪಿಸಲು ಹಠ ಹಿಡಿದು ಪ್ರತ್ಯೇಕ ನಿಧಿ ಕಾಯ್ದಿರಿಸಲು ಕಾರಣರಾದರು. ಇಚ್ಛಾಶಕ್ತಿ ಕೊರತೆಯಿಂದ ಹಣ ಅಭಿವೃದ್ಧಿಗಾಗಿ ಸದ್ಬಳಕೆ ಆಗಲಿಲ್ಲ. ಅಲ್ಲದೆ ನಿರುದ್ಯೋಗ ಸಮಸ್ಯೆ ನಿವಾರಣೆಗಾಗಿ 1995ರಲ್ಲಿ ಎಚ್.ಡಿ. ದೇವೇಗೌಡರ ಮಂತ್ರಿ ಮಂಡಲದಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದ ವೈಜನಾಥರು ಯುವಕರ ನಿರುದ್ಯೋಗ ಸಮಸ್ಯೆ ಕುರಿತು

ಕಾಳಜಿ ವಹಿಸಿದ್ದರು. ಅನ್ಯಾಯ, ಶೋಷಣೆ, ತಾತ್ಸಾರಭಾವ, ಮಲತಾಯಿ ಧೋರಣೆಯಿಂದ ಪ್ರತ್ಯೇಕ ರಾಜ್ಯಕ್ಕಾಗಿಯೂ ಹೋರಾಟ ಮಾಡಿದರು.

ವಿಶ್ವನಾಥರೆಡ್ಡಿ ಮುದ್ನಾಳ ಅವರ ಹೈದರಾಬಾದ ಕರ್ನಾಟಕ ಅಭಿವೃದ್ಧಿ ಕ್ರಿಯಾ ಸಮಿತಿಯ ಸೌಮ್ಯ ನೀತಿಯನ್ನು ಧಿಕ್ಕರಿಸಿ 'ಹೈದರಾಬಾದ ಕರ್ನಾಟಕ ಹೋರಾಟ ಸಮಿತಿ' ಹೆಸರಿನಲ್ಲಿ ಕಠಿಣ ನಿಲುವನ್ನು ತಾಳಿದರು. ಈ ಹೋರಾಟ ಸಮಿತಿ ಮೂಲಕ ಕರ್ನಾಟಕ ರಾಜ್ಯೋತ್ಸವ ದಿನವನ್ನು ಕರಾಳದಿನವೆಂದು ಘೋಷಿಸಿ, ಕಪ್ಪು ಬಾವುಟ ಹಿಡಿದು ಹಿಂದಿ ಪ್ರಚಾರ ಸಭಾ ಭವನದಿಂದ ಸರ್ದಾರ್ ವಲ್ಲಭಬಾಯಿ ಪಟೇಲ್ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ಕೈಗೊಂಡರು. ಈ ಭಾಗವನ್ನು ಎಲ್ಲ ರಂಗದಲ್ಲೂ ನಿರ್ಲಕ್ಷಿಸಿದ್ದಕ್ಕಾಗಿ ನಾಲ್ಕು ಜಿಲ್ಲಾ ಮಟ್ಟದಲ್ಲಿ ಮತ್ತು ಹಲವು ತಾಲೂಕು ಕೇಂದ್ರಗಳಲ್ಲಿ ಹೈದರಾಬಾದ್ ಕರ್ನಾಟಕದ ಪ್ರತ್ಯೇಕ ಧ್ವಜಾರೋಹಣ ನೆರವೇರಿಸಿದರು. ರಾಜ್ಯದ ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಸರ್ಕಾರ ಹೈ–ಕ ಪ್ರದೇಶಕ್ಕೆ ಸಂವಿಧಾನದ 371ನೇ ವಿಧಿ ಅನ್ವಯ ಮೀಸಲಾತಿಗಾಗಿ ಕೇಂದ್ರಕ್ಕೆ ಪತ್ರ ಬರೆದರು. ಆದರೆ ಆಗಿನ ಕೇಂದ್ರ ಗೃಹ ಸಚಿವ ಎಲ್.ಕೆ.ಅಡ್ವಾನಿ ಅವರು ಅನುಚ್ಛೇದ 371–ಡಿ ಸೇರಿಸಬೇಕಾದ 1973ರ ವಾತಾವರಣ ಸದ್ಯ ಕರ್ನಾಟಕದಲ್ಲಿಲ್ಲವೆಂದು ಹೇಳಿ ಕೈತೊಳೆದುಕೊಂಡರು. ಇದರಿಂದ ರೊಚ್ಚಿಗೆದ್ದ ವೈಜನಾಥರವರು ಡಾ.ಎಂ.ಚೆನ್ನರೆಡ್ಡಿಯವರಂತೆ ಪ್ರಜಾ ಪರಿಷತ್ತು ಪಕ್ಷವನ್ನು ಕಟ್ಟಿ ರಸ್ತೆ ತಡೆ, ವಾಹನಗಳ ದಹನದಂತಹ ದಾಂಧಲೆ ನಡೆಸಲು ಮುಂದಾದರು. ಹಾಗಾಗಿ ಎರಡೂಸರಕಾರಗಳಿಗೆ ಮಾನವೀಯ ಅನುಕಂಪ ಇಲ್ಲವೆಂದು ಭಾವಿಸಿ ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಟ ಅನಿವಾರ್ಯವಾಯಿತು.

ಇನ್ನು ಆರೋಗ್ಯ ಕ್ಷೇತ್ರದಲ್ಲೂ (ಇ.ಎಸ್.ಆಯ್ ಹೊರತುಪಡಿಸಿ) ಇಡೀ ರಾಜ್ಯಕ್ಕೆ ಹೋಲಿಸಿದರೆ, ಈ ಭಾಗ ಸಾಕಷ್ಟು ಪ್ರಗತಿ ಕಾಣದಿರುವುದು ಖೇದಕರ ವಿಷಯ. ಇಲ್ಲಿಯ ಸರಕಾರಿ ಆಸ್ಪತ್ರೆಗಳಲ್ಲಿ ಮೂಲಭೂತ ಸೌಲಭ್ಯ ಮತ್ತು ಸೇವಾ ಪೂರೈಕೆಯಲ್ಲಿ ಅಸಮಾನತೆಯಿಂದ ಕನಿಷ್ಠ ಆರೋಗ್ಯ ಸೂಚ್ಯಂಕ ಪ್ರಕಟಿಸುತ್ತವೆ. ಹಾಗೆಯೇ ಈ ಭಾಗದಲ್ಲಿ ಸಂಪೂರ್ಣ ನೀರಾವರಿಯಂತೂ ಬಿಡಿ, ಪ್ರಕೃತಿದತ್ತ ಮಳೆ ಕೂಡ ಸಕಾಲಕ್ಕೆ ಬಾರದೆ ಬೆಳೆಗಳು ಹಾಳಾಗಿ ರೈತರು ಕಂಗಲಾಗುವ ಪರಿಸ್ಥಿತಿ ಇದೆ. ಹಾಗಾಗ್ಗೆ ಬರುವ ಬರಗಾಲ ಜನರ ಬದುಕನ್ನು ದುಃಸ್ಥಿತಿಗೆ ತಳ್ಳುವುದು ಒಂದೆಡೆಯಾದರೆ, ರೈತರು ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದೆ ಆತ್ಮಹತ್ಯೆಗೆ ಸಾವಿಗೀಡಾಗುತ್ತಿರುವುದು ಮತ್ತೊಂದೆಡೆ. ಇಂತಹ ಒಂದೆರೆಡು ಘಟನೆಗಳು ಉಳಿದ ಕಡೆ ಸಂಭವಿಸಿದರೆ, ಸರಕಾರ ತಕ್ಷಣ ಸ್ಪಂದಿಸಿ ಪರಿಹಾರ ಘೋಷಣೆಗೆ ಮುಂದಾಗುತ್ತವೆ. ಆದರೆ ಈ ಭಾಗವನ್ನು ಸರಕಾರ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಎಂಬಂತೆ ನಿರ್ಲಕ್ಷಿಸುತ್ತ ಬಂದಿದೆ.

ನಿಜಾಮನ ಕಾಲದಿಂದಲೂ ಈ ಭಾಗದಲ್ಲಿ ಹೇಳಿಕೊಳ್ಳುವಂತಹ ಕೆರೆ–ಭಾವಿಗಳಿಲ್ಲ. ಅಲ್ಲದೆ ಕೃಷ್ಣಾ ಮತ್ತು ಕಾರಂಜಾ ಯೋಜನೆಗಳು ಆರಂಭದಿಂದ ಇಂದಿನವರೆಗೆ ಆರಂಭಾವಸ್ಥೆಯಲ್ಲಿಯೇ ಇವೆಯೆಂಬುದು ಶೋಚನೀಯ ಸಂಗತಿ. ಈಗಲಾದರೂ ಸರಕಾರ ಎಚ್ಚೆತ್ತು ಇವುಗಳ ಶಾಶ್ವತ ಕಾರ್ಯಯೋಜನೆಗೆ ಮುಂದಾಗುತ್ತಿಲ್ಲ. ಇಂತಹ ನೀರಾವರಿ ಯೋಜನೆಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರು ಈ ಭಾಗದವರು ಅನ್ನುವುದನ್ನು ಬಿಟ್ಟರೆ ಉಳಿದವರೆಲ್ಲರು ಇತರೆ ಪ್ರದೇಶಕ್ಕೆ ಸೇರಿದವರಾಗಿದ್ದಾರೆ. ಈ ಪ್ರದೇಶದಲ್ಲಿ ಮೊದಲಿಂದಲೂ ಯಾವುದೇ ಕಾರ್ಖಾನೆಗಳಿಲ್ಲ, ಕೆಲವೇ ಕೆಲವು ಸಿಮೆಂಟ್ ಫ್ಯಾಕ್ಟರಿ, ರೈಸ್‌ಮಿಲ್ ಮತ್ತು

ಎಣ್ಣೆ ಮಿಲ್‌ಗಳನ್ನು ಹೊರತು ಪಡಿಸಿದರೆ ಹೇಳಿಕೊಳ್ಳುವಂತಹ ಉದ್ಯಮಗಳು ಸ್ಥಾಪನೆಯಾಗಿಲ್ಲ. ಹಾಗಾಗಿ ಇಲ್ಲಿಯ ಜನತೆ ಹೆಚ್ಚಾಗಿ ಬಡತನದಲ್ಲಿಯೇ ಬದುಕುತ್ತಿದ್ದಾರೆ. ರಸ್ತೆ ಮತ್ತು ಸಾರಿಗೆ ವ್ಯವಸ್ಥೆಯಂತೂ ಇಲ್ಲಿ ಹೇಳತೀರದು. ರಾಜ್ಯ ಹೆದ್ದಾರಿ, ಜಿಲ್ಲಾ, ತಾಲ್ಲೂಕು ರಸ್ತೆಗಳು ತೀರಾ ಹದಗೆಟ್ಟಿವೆ. ಇನ್ನು ಗ್ರಾಮೀಣ ರಸ್ತೆಗಳ ಸ್ಥಿತಿಯಂತೂ ಹೇಳಲಾಗದು. ಎಷ್ಟೋ ಹಳ್ಳಿಗಳಿಗೆ ಇಂದಿಗೂ ಸರಿಯಾದ ರಸ್ತೆಗಳಿಲ್ಲ. ಸರಕಾರಿ ಬಸ್ಸುಗಳು ಬರುತ್ತವೆಂಬುದು ಕನಸಿನ ಮಾತು. ಸಾರಿಗೆ ವ್ಯವಸ್ಥೆಯಲ್ಲಿ ಈ ಭಾಗಕ್ಕೆ ಹೇಳಿಕೊಳ್ಳುವಂತಹ ವ್ಯವಸ್ಥಿತ ಬಸ್ ಡಿಪೋಗಳಿಲ್ಲ. ಬಸ್ಸುಗಳಿದ್ದರೂ ಬಹಳಷ್ಟು ಹಳೆಯ ಮಾಡಲ್‌ಗಳಿವೆ.

ಲಾಭ ತರುವ ಹಾರಗಳೆಲ್ಲ ಅವರಿಗೆ ಹೆಣ ಹೊರುವ ಭಾರಗಳೆಲ್ಲ ನಮಗೆ ಎಂಬುದು ಯಾವ ದೇಶದ ನಾಗರಿಕ ನ್ಯಾಯ? ನೌಕರಿ, ವೃತ್ತಿಶಿಕ್ಷಣ ಸಂಸ್ಥೆಗಳಲ್ಲಷ್ಟೇ ಅಲ್ಲ ಇತರ ಪ್ರಾಧಿಕಾರ, ಅಕಾಡೆಮಿ, ಆಯೋಗ, ಮಂಡಳಿ, ಸಭೆ, ಸಮ್ಮೇಳನ ಇತ್ಯಾದಿಗಳಿಂದ ಈ ಭಾಗದ ಜನರನ್ನು ನಿರ್ಲಕ್ಷಿಸಲಾಗುತ್ತಿದೆ. ಮೊದಲಿಂದಲು ಈ ಭಾಗದಲ್ಲಿ ಸಾಹಿತಿ, ಕಲಾವಿದರಿಗೆ ಕೊರತೆ ಇಲ್ಲ. ಕನ್ನಡದ ಮೊದಲ ಕೃತಿ 'ಕವಿರಾಜಮಾರ್ಗ' ರಚನೆಗೊಂಡಿದ್ದು ಮಳಖೇಡ್ (ಮಾನ್ಯಖೇಟ)ದಲ್ಲಿ. ಇಡೀ ವಿಶ್ವಕ್ಕೆ ವಿಶಿಷ್ಟ ಕೊಡುಗೆ ನೀಡಿರುವ ವಚನ ಸಾಹಿತ್ಯ ಸೃಷ್ಟಿಯಾದದ್ದು ಈ ಭಾಗದ ಬಸವ ಕಲ್ಯಾಣದಲ್ಲಿ. ದಾಸರು, ಸ್ವರ ವಚನಕಾರರು, ತತ್ವಪದಕಾರರು, ಸೂಫಿ ಸಂತರು ಹೆಚ್ಚಾಗಿ ಜನ್ಮತಾಳಿದ್ದು ಈ ಭಾಗದಲ್ಲಿಯೇ. ಆದರೆ ನಾಡಿನ ಸಾಂಸ್ಕೃತಿಕ ಸಂಪತ್ತು ಉಳಿಸಿ ಬೆಳೆಸುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪರಿಷತ್ತು, ಅಕಾಡೆಮಿ, ಪ್ರಾಧಿಕಾರ ಮತ್ತು ಲೋಕಸೇವಾ ಆಯೋಗಗಳಲ್ಲಿ ಈ ಭಾಗದ ಜನರಿಗೆ ಸೂಕ್ತ ಪ್ರಾಶಸ್ತ್ಯ ದೊರೆಯದಿರುವುದು ಅನ್ಯಾಯ ಹಾಗೂ ಶೋಷಣೆಯ ಪ್ರತೀಕವಾಗಿದೆ. ಈ ಭಾಗಕ್ಕೆ ಎಲ್ಲದರಲ್ಲೂ ಪ್ರಾತಿನಿಧ್ಯ ನೀಡುವುದಿರಲಿ ನ್ಯಾಯಯುತವಾಗಿ ನೀಡಬೇಕಾದ ಹಕ್ಕು ನೀಡದಿರುವುದು ನೋವಿನ ಸಂಗತಿ.

ಸಾಹಿತ್ಯಿಕ–ಸಾಂಸ್ಕೃತಿಕವಾಗಿ ಮೈಸೂರು, ಬೆಂಗಳೂರು, ಧಾರವಾಡ ಮತ್ತು ಮಂಗಳೂರು ಮೊದಲಾದ ಭಾಗಗಳಿಗೆ ಕೋಟಿಗಟ್ಟಲೆ ಅನುದಾನದಲ್ಲಿ ಉತ್ಸವಾದಿಗಳು ನಡೆಯುತ್ತವೆ. ಆದರೆ ಈ ಪ್ರದೇಶದಲ್ಲಿ ಹೇಳಿಕೊಳ್ಳುವಂತಹ (ಹಂಪಿ ಉತ್ಸವ ಬಿಟ್ಟರೆ) ದೊಡ್ಡ ಉತ್ಸವಗಳು ಜರುಗುತ್ತಿಲ್ಲ. ವಿಶ್ವಕ್ಕೆ ವಚನ ಸಾಹಿತ್ಯದ ನಾಡಾದ ಬಸವ ಕಲ್ಯಾಣ ಪ್ರವಾಸಿಗರಿಗೆ ಹಾಳೂರು ತರ ಇದೆ. ನೋಡಲು ಬರುವವರಿಗೆ ಪ್ರವಾಸೋದ್ಯಮ ಇಲಾಖೆ ಯಾವುದೇ ಪುನರುಜ್ಜೀವನ ಕಾಮಗಾರಿ ಕೈಗೊಳ್ಳದಿರುವುದು ಈ ಭಾಗದ ಯಾತ್ರಾಸ್ಥಳಗಳ ಕುರಿತು ಇರುವ ನಿರ್ಲಕ್ಷತನ ಎತ್ತಿ ತೋರುತ್ತದೆ. ನಾಗಾವಿ, ಮಹಮ್ಮದ್ ಗವಾನನ ಮದರಸಾ, ಮಳಖೇಡ, ಆನೆಗುಂದಿ ಇತ್ಯಾದಿ ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಸ್ಥಳಗಳಾಗಿದ್ದು ನೂರಾರು ಶಿಲ್ಪಿಗಳು, ಶಾಸನಗಳು, ಕೋಟೆಗಳು ಮತ್ತು ಸ್ಮಾರಕಗಳು ಇಂದು ಅವಸಾನದ ಅಂಚಿನಲ್ಲಿವೆ. ಈ ಕುರಿತು ಸಂಬಂಧಪಟ್ಟ ಇಲಾಖೆ ಯಾವುದೇ ಕಾಳಜಿ ವಹಿಸುತ್ತಿಲ್ಲ. ಇದಲ್ಲದೆ ಈ ಭಾಗದಲ್ಲಿ ಸಾಹಿತಿ, ಕಲಾವಿದರಿಗೆ ಕೊರತೆಯಿಲ್ಲ. ಪ್ರತಿಭಾನ್ವಿತರು ರಾಜ್ಯ, ರಾಷ್ಟ್ರ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಆಯಾ ಕ್ಷೇತ್ರದಲ್ಲಿ ಉನ್ನತವಾದ ಸಾಧನೆಯನ್ನು ಮಾಡಿ ಖ್ಯಾತಿ ಪಡೆದವರಿದ್ದಾರೆ. ಅಂತಹವರನ್ನು ಗುರುತಿಸಿ ಪುರಸ್ಕರಿಸುವ ಕಾರ್ಯ ಆಗುತ್ತಿಲ್ಲ.ಬೆಂಗಳೂರು, ಮೈಸೂರುಗಳಲ್ಲಿ ಇರುವಂತಹ ವಸ್ತುಸಂಗ್ರಹಾಲಯ ಆಗಲಿ, ಪ್ಲಾನಿಟೋರಿಯಂ ಆಗಲಿ, ಪ್ರಾಣಸಂಗ್ರಹಾಲಯ ಆಗಲಿ, ಆರ್ಟ್ ಗ್ಯಾಲರಿಗಳಾಗಲಿ ಈ ಭಾಗದಲ್ಲಿ ಹೇಳಿಕೊಳ್ಳುವ ರೀತಿಯಲ್ಲಿಲ್ಲ.

**ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಸಲಹೆಗಳು**

ಹೈದರಾಬಾದ್–ಕರ್ನಾಟಕ ಇಂದು ಕಲ್ಯಾಣ ಕರ್ನಾಟಕ ಎಂದು ನಾಮಕರಣಗೊಂಡಿದೆ. ಆದರೆ ನಿಜಾರ್ಥದಲ್ಲಿ ಅಭಿವೃದ್ಧಿ ಕಾರ್ಯಗಳಾದರೆ ಕಲ್ಯಾಣಕ್ಕೆ ಅರ್ಥ ಬರುತ್ತದೆ ಎಂಬ ನಿಟ್ಟಿನಲ್ಲಿ ಅವಲೋಕಿಸಬೇಕಿದೆ. ಶೈಕ್ಷಣಿಕವಾಗಿ ಪ್ರಗತಿ, ಕೈಗಾರಿಕೆ ಬೆಳವಣಿಗೆ, ಆರೋಗ್ಯ ಮತ್ತು ನೀರಾವರಿ ಕ್ಷೇತ್ರಗಳಲ್ಲಿ ಸುಧಾರಣೆಯಾಗಬೇಕು. ಇದಕ್ಕೆ ಮುಖ್ಯವಾಗಿ ರಾಜಕೀಯ ಇಚ್ಛಾಶಕ್ತಿಬೇಕು. ಹೈಕೋರ್ಟ್ ಪೀಠಗಳೇ ವಿಕೇಂದ್ರೀಕರಣಗೊಂಡು ನ್ಯಾಯದಾನ ಮಾಡುತ್ತಿರುವಾಗ ಆಡಳಿತದಲ್ಲೂ ಅಧಿಕಾರ ವಿಕೇಂದ್ರೀಕರಣ ಪರಿಣಾಮಕಾರಿಯಾಗಿ ಜಾರಿಗೆ ತರುವುದು ಅಗತ್ಯ. ಹೈ–ಕ ಹಿಂದುಳಿದ ಪ್ರದೇಶ ಎಂಬ ಕಾರಣಕ್ಕಾಗಿ 371 (ಜೆ) ವಿಧಿ ಜಾರಿಗೆ ತರಲಾಗಿದೆ. ಆದರೆ ಇದರಡಿ ಅಸ್ತಿತ್ವಕ್ಕೆ ಬಂದಿರುವ ಹಿಂದಿನ ಹೈ–ಕ ಪ್ರದೇಶಾಭಿವೃದ್ಧಿ ಮಂಡಳಿ (ಎಚ್.ಕೆ.ಆರ್.ಡಿ.ಬಿ) ಈಗಿನ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಕೆ.ಆರ್.ಡಿ.ಬಿ)ಗೆ ಸ್ವಾಯತ್ತತೆ ನೀಡಬೇಕು. ಆಗ ಎಲ್ಲ ಕಾರ್ಯಕ್ಕೂ ಬೆಂಗಳೂರಿನಲ್ಲಿರುವ ಅಧಿಕಾರಿಗಳನ್ನು ಅವಲಂಬಿಸುವುದು ಇದರಿಂದ ತಪ್ಪುತ್ತದೆ.

ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರ ರೀತಿಯಲ್ಲಿ 'ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ' ಸಚಿವರು–ಶಾಸಕರು–ಸಂಸದರನ್ನು ಅಧ್ಯಕ್ಷ ಹಾಗೂ ಸದಸ್ಯರನ್ನಾಗಿ ಮಾಡದೇ, ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರನ್ನು ಮುಖ್ಯಸ್ಥರನ್ನಾಗಿ, ರಾಜ್ಯದ ಇತರೇ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳನ್ನು ಸದಸ್ಯರನ್ನಾಗಿ ನೇಮಿಸಬೇಕು. ಬೇಕಾದರೆ ಈ ಭಾಗದ ಎಲ್ಲ ಶಾಸಕರುಗಳನ್ನು ಸಲಹಾ ಮಂಡಳಿ ಸದಸ್ಯರನ್ನಾಗಿ ಮಾಡಬಹುದು. ಆಗ ಮಾತ್ರ ಕೆ.ಕೆ.ಆರ್.ಡಿ.ಬಿ. ಅಭಿವೃದ್ಧಿ ಕಾರ್ಯಗಳು ತ್ವರಿತಗತಿಯಲ್ಲಿ ಅನುಷ್ಠಾನಗೊಳ್ಳಲು ಸಾಧ್ಯ. ಆರು ಜಿಲ್ಲೆಗಳ ನಡುವೆ ಅಭಿವೃದ್ಧಿ ಸೇರಿದಂತೆ ಇತರೆ ಯಾವುದೇ ಕ್ಷೇತ್ರದಲ್ಲಿ ಸಮನ್ವಯತೆ ಇಲ್ಲ. ಆದುದದರಿಂದ ಈ ಹಿಂದೆ ಪ್ರೊ.ನಂಜುಂಡಪ್ಪ ನೇತೃತ್ವದಲ್ಲಿ ರಚನೆಯಾದ ಪ್ರಾದೇಶಿಕ ಅಸಮಾನತೆ ನಿವಾರಣಾ ಸಮಿತಿಯಂತೆ, ಹೊಸದಾಗಿ ತಜ್ಞರ ಸಮಿತಿ ರಚನೆ ಮಾಡಿ ಸಮಗ್ರ ವರದಿ ರೂಪಿಸಿ, ಅಭಿವೃದ್ಧಿ ಕಾರ್ಯ ಕೈಗೊಂಡಲ್ಲಿ ನಿಜವಾಗಿ 'ಕಲ್ಯಾಣ ಕರ್ನಾಟಕ' ಆಗುವ ನಿಟ್ಟಿನಲ್ಲಿ ಸಾಗಬಹುದು. ರಾಜ್ಯದ 6.40 ಕೋಟಿ ಜನಸಂಖ್ಯೆ ಪೈಕಿ ಕಲ್ಯಾಣ ಕರ್ನಾಟಕದಲ್ಲಿ ಅಂದಾಜು 1.30 ಕೋಟಿ ಜನರಿದ್ದಾರೆ. ಇದರ ಆಧಾರದಡಿ ರಾಜ್ಯದ ಒಟ್ಟಾರೆ ಬಜೆಟ್‌ನ ಎರಡುವರೆ ಲಕ್ಷ ಕೋಟಿಯಲ್ಲಿ, ಈ ಭಾಗಕ್ಕೆ ಶೇಕಡವಾರು ಆದ್ಯತೆ ನೀಡಬೇಕು. ಬಿಡುಗಡೆಯಾದ ಅನುದಾನ ಪೂರ್ಣ ಬಳಕೆ ಆಗಲು ಉನ್ನತ ಮಟ್ಟದ ನಿಗಾ ಸಮಿತಿ ರಚಿಸಬೇಕು.

ಈ ಪ್ರದೇಶದ ಸಮಗ್ರ ಅಭಿವೃದ್ಧಿ ಜವಾಬ್ದಾರಿಯುತ ಸ್ವಾಯತ್ತ ಪ್ರಾದೇಶಿಕ ಸರಕಾರವಾಗಿ ಕಾರ್ಯನಿರ್ವಹಿಸುವಂತಾಗಬೇಕು. ಅಲ್ಲದೇ ಮಂಡಳಿಯ ಆರ್ಥಿಕ ಸ್ವಾವಲಂಬನೆಗೆ ಸರಕಾರ ವಿಶೇಷ ತೆರಿಗೆ ವಿಧಿಸುವ ಅಧಿಕಾರ ನೀಡಿದಾಗ ಮಂಡಳಿಯನ್ನು ಇನ್ನಷ್ಟು ಆರ್ಥಿಕವಾಗಿ ಬಲಪಡಿಸಬಹುದು. ಕೇವಲ ಸರಕಾರದ ಅನುದಾನ ಮಾತ್ರ ನೆಚ್ಚಿಕೊಂಡು ಪರಾವಲಂಬಿತ ಪ್ರಾದೇಶೀಕ ಅಭಿವೃದ್ಧಿ ಮಂಡಳಿಯಾಗದೆ, ಅದಕ್ಕೆ ಪ್ರಾದೇಶಿಕ ಸರಕಾರದ ಮಾನ್ಯತೆ ನೀಡಿ, ಆಡಳಿತಾತ್ಮಕ ಮತ್ತು ಹಣಕಾಸಿನ ಅಧಿಕಾರಗಳನ್ನು

ನೀಡಬೇಕು. ಈ ಭಾಗದ ಜನರ ಮುಂದೆ ಅನೇಕ ನಿರೀಕ್ಷೆಗಳಿವೆ. 'ಹಿಂದುಳಿದ' ಎಂಬ ಹಣೆಪಟ್ಟಿಯನ್ನು ಶಾಶ್ವತವಾಗಿ ತೊಲಗಿಸಿ ಅಭಿವೃದ್ಧಿ ಪರ್ವಕ್ಕೆ ನಾಂದಿ ಹಾಡಬೇಕಿದೆ.

ಇಲ್ಲಿನ ಸಮಸ್ಯೆಗಳಿಗೆ ಪರಿಹಾರವೆಂದರೆ ಪ್ರವೇಶಾತಿ, ಫಲಿತಾಂಶ ಹಾಗೂ ನೇಮಕಾತಿ ವಿಭಾಗವಾರು ಆಗಬೇಕು. ಜತೆಗೆ ಪ್ರತ್ಯೇಕ ಸಚಿವಾಲಯ, ಇಲಾಖೆಗಳು ಇಲ್ಲಿಯೇ ಸ್ಥಾಪನೆಯಾಗಬೇಕು. ಆಗ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯವಾಗುವುದು.

**ಉಪಸಂಹಾರ**

ಕಲ್ಯಾಣ ಕರ್ನಾಟಕ ಪ್ರದೇಶವು ಮೊದಲಿನಿಂದಲೂ ಆಡಳಿತಾತ್ಮಕ ಸರ್ಕಾರಗಳ ನಿರ್ಲಕ್ಷ್ಯಕ್ಕೊಳಗಾಗಿದ್ದು, ಹಲವಾರು ಸಮಸ್ಯೆಗಳು ಇಲ್ಲಿನ ಜನರನ್ನು ಕಾಡುತ್ತಿದ್ದು, 371 (ಜೆ) ಕಲಂ ನಿಂದಾಗಿ ಆಶಾಕಿರಣ ಮೂಡುತ್ತಿದೆ. ಇದರ ಪರಿಣಾಮಕಾರಿ ಅನುಷ್ಠಾನ ಮತ್ತು ಈ ಪ್ರದೇಶದ ಅಭಿವೃದ್ಧಿಗೆ ಜನತೆ, ಸರಕಾರ, ಅಧಿಕಾರಶಾಹಿವರ್ಗ ಒಗ್ಗಟ್ಟಿನಿಂದ ಮುಂದೆ ಸಾಗಬೇಕಿದೆ. ಆಗಲೇ ವಿಶಿಷ್ಟ ಅಂತಃಸತ್ವ ಹೊಂದಿರುವ ಕಲ್ಯಾಣ ಕರ್ನಾಟಕ ಭಾಗ ಸುಧಾರಣೆಯ ಕ್ರಾಂತಿಗೆ ತೆರೆದುಕೊಳ್ಳಬಹುದು ಮತ್ತು ವರ್ಷದಿಂದ ವರ್ಷಕ್ಕೆ ನಿಷ್ಕೃಷ್ಟವಾಗುತ್ತಿರುವ ಜನರ ಬಾಳು ಬದಲಾಗಲು ಸಹಾಯವಾಗುತ್ತದೆ.

**ಪರಾಮರ್ಶನ/ಆಕರ ಗ್ರಂಥಗಳು**


- ದ್ರುವನಾರಾಯಣ ಎಂ. (2017).ಹೈದಾರ್‌ಬಾದ್ ಕರ್ನಾಟಕದಲ್ಲಿ ಕನ್ನಡ ಕಟ್ಟಿದವರು. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ನಾರಾಯಣರಾವ್ ಎ.ಎಸ್. (ಮಾರ್ಚ್ 21, 2011). 371 ನೇ ಕಲಂ ತಿದ್ದುಪಡಿಗೆ ದಂಡಯಾತ್ರೆ. ಪ್ರಜಾವಾಣಿ ದಿನಪತ್ರಿಕೆ, ಬೆಂಗಳೂರು.
- ವೈಜನಾಥ ಪಾಟೀಲ್. (2005). ಹೈದರಾಬಾದ ಕರ್ನಾಟಕ ಅಸಮಾನತೆಯ ಒಂದು ನೋಟ. ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಪರಿಷತ್ತು ಕಲಬುರಗಿ.
- ಶರತ್ ಹೆಗ್ಡೆ. (ಸೆಪ್ಟೆಂಬರ್ 17, 2014). ವಿಮೋಚನೆ ಹಾದಿಯ ಹಿನ್ನೋಟ. ಪ್ರಜಾವಾಣಿ ದಿನಪತ್ರಿಕೆ, ಬೆಂಗಳೂರು.
- ಸಿದ್ದಯ್ಯ ಸ್ವಾಮಿ ಕುಕುನೂರು. (ಸೆಪ್ಟೆಂಬರ್ 17, 2012). ಸಮಸ್ಯೆಗಳಿಗಿಲ್ಲ ವಿಮೋಚನೆ. ವಿಜಯವಾಣಿ ದಿನಪತ್ರಿಕೆ, ಬೆಂಗಳೂರು.
- ಹಣಮಂತರಾವ ಭೈರಾಮಡಗಿ. (ಸೆಪ್ಟೆಂಬರ್ 17, 2019). ಕಲ್ಯಾಣ ಆಗಲಿ ಕರ್ನಾಟಕ. ಉದಯವಾಣಿ, ಬೆಂಗಳೂರು.
- Saidapur S. (2017). Development Issues in Hyderabad-Karnataka. Abhijeet Publications, New Delhi.